ಸಾಮಾಜಿಕ ಬದಲಾವಣೆಗಳ ಕಡೆಗೆ ಚಿಕಿತ್ಸಕ ದೃಷ್ಟಿ ಹೊಂದಿರುವ ಮಿರ್ಜಾ ಬಷೀರ್ ಅವರು ವೃತ್ತಿಯಿಂದ ಪಶುವೈದ್ಯರು. ಬರವಣಿಗೆಯನ್ನು ತುಂಬಾ ಪ್ರೀತಿಸುವವರು. ಕಥೆಗಳು ಅವರ ಇಷ್ಟದ ಪ್ರಕಾರ. 'ಬಟ್ಟೆಯಿಲ್ಲದ ಊರಿನಲ್ಲಿ', 'ಜಿನ್ನಿ', 'ಹಾರುವ ಹಕ್ಕಿ ಮತ್ತು ಇರುವೆ' ಮತ್ತು 'ಗಂಗೆ ಬಾರೆ ಗೌರಿ ಬಾರೆ' ಎಂಬ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಲಂಕೇಶ್ ಪ್ರಶಸ್ತಿ, ಬೆಸಗರಹಳ್ಳಿ ರಾಮಣ್ಣ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳು ಅವರಿಗೆ ಸಂದಿವೆ.

ಕೊಂಡು ತಂದು ತಿರುವಿ ಹಾಕತೊಡಗಿದರು. ಬರೀ ಮೊಬೈಲು, ಟಿ.ವಿ., ಜಾತಿರಾಜಕಾರಣ, ಚಾಡಿ, ಕಾಡುಹರಟೆಗಳಲ್ಲಿ ಕಾಲ ಕಳೆಯುತ್ತಿದ್ದವರಿಗೆ ಓದುವುದೇ ದೊಡ್ಡ ಹಿಂಸೆಯಾಗಿತ್ತು. ತಮ್ಮ ಶಾಲಾ ಕಾಲೇಜುಗಳ ಅಂತಿಮ ಪರೀಕ್ಷೆಯಾದ ನಂತರ ಅವರು ಪುಸ್ತಕಗಳನ್ನು ಮುಟ್ಟಿರಲೇ ಇಲ್ಲ. ಆದರೀಗ ಓದಿದರೆ ಏನಾದರೂ ಗಿಟ್ಟಬಹುದೆಂದು ಓದತೊಡಗಿದರು. ಕಣ್ಣಮುಂದೆ ಅಕ್ಷರಗಳು ಕಂಡ ಕೂಡಲೇ ನಿದ್ದೆ ಆವರಿಸಿ ತೂಕಡಿಸಿ ಬೀಳತೊಡಗಿದರು. ಎಲ್ಲವೂ ಗೋಜಲಾಗಿ ಕೆಲವರು ಜ್ಯೋತಿಷಿಗಳ ಮೊರೆಹೊಕ್ಕರು. ಕೆಲವರು ಧರ್ಮಗುರುಗಳನ್ನು, ಮತ್ತೆ ಕೆಲವರು ವಿಶ್ವವಿದ್ಯಾಲಯದ ಪ್ರೊಫೆಸರ್‌ಗಳನ್ನು, ವಿಜ್ಞಾನಿಗಳನ್ನು ಬಿನ್ನವಿಸಿಕೊಂಡರು. ಅವರೂ ಸಹ ಬಂದ ಭಕ್ತಾದಿಗಳನ್ನು, ವಿಶ್ವಾಸಿಗಳನ್ನು ನಿರಾಶೆಗೊಳಿಸಲಿಲ್ಲ. ಶಕ್ತ್ಯಾನುಸಾರ ಎಲ್ಲರಿಂದ ಕಾಣಿಕೆ ಪಡೆದು ಅಡುಗೆ ಮನೆಯ ಉಪ್ಪು ಹುಣಸೆಹಣ್ಣಿನಿಂದ ಹಿಡಿದು ಗ್ರಹ ನಕ್ಷತ್ರ ನೀಹಾರಿಕೆಗಳವರೆಗೆ, ದೇಶದ ರಾಜಕೀಯದಿಂದ ಹಿಡಿದು ಕ್ರೀಡೆ, ಇತಿಹಾಸ, ಅಧ್ಯಾತ್ಮ ಮುಂತಾಗಿ ನೂರೆಂಟು ವಿಷಯಗಳನ್ನು ಓದಬೇಕೆಂದು ಹೇಳಿ ದಿಗಿಲಿಕ್ಕಿಸಿದರು.

ಹಣವನ್ನು ಕನವರಿಸುತ್ತಿದ್ದ 'ಸಕತ್ ಸತಿಪತಿ' ಹುರಿಯಾಳುಗಳು ವಾರಗಟ್ಟಲೆ ಅವರಿವರ ಮಾತುಗಳಿಗೆ ಕಿವಿಯಾಗಿ ರಾಡಿಯೆದ್ದು ಹೋದರು. ಪ್ರತಿ ವರ್ಷ ಎಸ್ಸೆಸ್ಸೆಲ್ಸಿ, ಪಿಯುಸಿ, ಎಸ್‌ಡಿಎ, ಎಫ್‌ಡಿಎ ಮುಂತಾದ ಅನೇಕ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳನ್ನು ಕದ್ದು ಹೊರಗೆಡಹುತ್ತಿದ್ದ ಮಹಾನುಭಾವನೊಬ್ಬ ಸದರಿ ಸಂದರ್ಭದ ಲಾಭ ಗಿಟ್ಟಿಸಲು ಒಂದು ಪ್ರಶ್ನೆ ಪತ್ರಿಕೆಯನ್ನು ಸೃಷ್ಟಿಸಿ ಉತ್ತರಗಳ ಸಮೇತ ಕದ್ದುಮುಚ್ಚಿ ಬಯಲು ಮಾಡಿ ಕಾಸು ಮಾಡಿಕೊಂಡನೆಂಬ ಗುಸುಗುಸು ಅಲ್ಲಲ್ಲಿ ಕೇಳಿಬಂದಿತು. ಜನರು ಇದು ಮೌಖಿಕ ಪರೀಕ್ಷೆಯೋ, ಲಿಖಿತ ಪರೀಕ್ಷೆಯೋ ಎಂಬ ಮತ್ತೊಂದು ಗೊಂದಲಕ್ಕೆ ಬಿದ್ದರು. ಅತ್ಯುತ್ತಮ ದಂಪತಿಗಳಾಗಲು ಪ್ರಶ್ನೋತ್ತರಗಳನ್ನು ಗಟ್ಟು ಮಾಡುತ್ತಿದ್ದುದು ತಮಾಷೆಯಾಗಿತ್ತು. ಆದರೆ, ಎಲ್‌ಕೆಜಿಯಿಂದ ಮೊದಲ್ಗೊಂಡು ಬರೀ ಉರು ಹೊಡೆದು ಪಾಸು, ಫಸ್ಟ್ ಕ್ಲಾಸು, ಡಿಸ್ಟಿಂಕ್ಷನ್ನು, ರ್‍ಯಾಂಕು ಗಿಟ್ಟಿಸಿ ಎಂಜಿನಿಯರು, ಸರ್ಜನ್ನು, ವಿಜ್ಞಾನಿ, ಪ್ರೊಫೆಸರು, ಧಾರ್ಮಿಕ ಮುಖಂಡಗಳಾದವರಿಗೆ ಅದೇನೂ ವಿಚಿತ್ರವಾಗಿ ಕಾಣದೆ ಸಹಜವಾಗಿಯೇ ಇತ್ತು.

ಅಂದು ದೇಶದಲ್ಲಿಯೇ ಅತಿ ದೊಡ್ಡದಾದ 'ಅಬ್ರಕಡಬ್ರ' ಮಾಲ್ ಉದ್ಘಾಟನೆಯಾಗುವುದಿತ್ತು. ಆ ದಿನವೇ ಮಾಲ್‌ನ ಭವ್ಯವಾದ ಸಭಾಂಗಣದಲ್ಲಿ 'ಸಕತ್ ಸತಿಪತಿ'ಯ ಮೊದಲ ದಿನದ ಆಯ್ಕೆ ಮತ್ತು ಬಹುಮಾನ ವಿತರಣೆಯ ಚಿತ್ರೀಕರಣವಾಗುವುದಿತ್ತು. ಅಲ್ಲಿ ನೂರಾರು ಜೋಡಿಗಳು ನೆರೆದಿದ್ದರು. ಅವರೆಲ್ಲ ಒಂದು ದಿನ ಹಿಂದೆಯೇ ಅಲ್ಲಿಗೆ ಬಂದು ತಾವು ಅಧಿಕೃತ ದಂಪತಿಗಳೆಂಬುದಕ್ಕೆ ದಾಖಲೆಗಳನ್ನು ಒದಗಿಸಿ ನೋಂದಣಿ ಮಾಡಿಸಿದ್ದರು. ಅದಕ್ಕೆ ಬೇಕಾದ ಆಧಾರ್ ಕಾರ್ಡು, ವಂಶವೃಕ್ಷ, ಗುಡಿ, ಮಸೀದಿ, ಚರ್ಚು, ಕೋರ್ಟುಗಳಿಂದ ಪ್ರಮಾಣ ಪತ್ರ, ಲಗ್ನಪತ್ರಿಕೆ, ಫೋಟೋ, ಸಿ.ಡಿ. ಇತ್ಯಾದಿಗಳನ್ನು ಸಂಬಂಧಿಸಿದ ಕಡೆ ವಾರಗಟ್ಟಲೆ ಅಲೆದು ಸಿದ್ಧ ಮಾಡಿಕೊಂಡಿದ್ದರು. ಜಿಲ್ಲಾ ಉಸ್ತುವಾರಿ ಮಂತ್ರಿಯೇ ಎಲ್ಲ ಇಲಾಖೆಗಳಿಗೆ ಪ್ರಮಾಣ ಪತ್ರಗಳನ್ನು ಆದ್ಯತೆಯ ಮೇಲೆ ಕೊಡಬೇಕು ಮತ್ತು ಅನವಶ್ಯಕ ವಿಳಂಬ ಮಾಡಕೂಡದೆಂದು

